# ರಾಯಚೂರು ಜಿಲ್ಲೆಯ ದಲಿತ ಕಾವ್ಯ: ವಸ್ತು ಮತ್ತು ಶೈಲಿ

ಲೇಖಕರು

ರವಿಕುಮಾರ ದೇವಪ್ಪ
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ.

ಮಾರ್ಗದರ್ಶಕರು

ಪ್ರೊ|| ಶರಣಪ್ಪ ಎಸ್. ಮಾಳಗಿ
ಪ್ರಾಂಶುಪಾಲರು,
ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ,
ಮಹಾಗಾಂವ್ ಕ್ರಾಸ್, ತಾ|| ಕಮಲಾಪುರ ಜಿ||ಕಲಬುರಗಿ.

ಕನ್ನಡ ಸಾಹಿತ್ಯವು ಭಾರತೀಯ ಸಾಹಿತ್ಯ ಶ್ರೀಮಂತಗೊಂಡು ಜಗತ್ತಿಗೆ ಸುಂದರವಾಗಿ ಕಂಗೊಳಿಸುವಂತೆ ಕಾಣಲು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದೆ ಎಂದರೆ ಬಹುಶಃ ತಪ್ಪಾಗಲಾರದು. ಕನ್ನಡ ಸಾಹಿತ್ಯವು ತುಂಬಾ ವಿಶಾಲವಾದ ಮತ್ತು ದೀರ್ಘವಾದ ಇತಿಹಾಸ ಹೊಂದಿರುವುದನ್ನು ನಾವು ಗಮನಿಸಿದರೆ ಇದರ ಪ್ರಸ್ತುತತೆಯ ಬಗ್ಗೆ ನಮಗೆ ತಿಳಿಯುತ್ತದೆ.

ಕಾಲ ಬದಲಾದಂತೆ ಸಾಹಿತ್ಯ ತನ್ನ ರೂಪ ಮತ್ತು ಗುರಿ ಉದ್ದೇಶಗಳನ್ನು ಬದಲಾಯಿಸಿಕೊಂಡು ಓದುವ ಸಹೃದಯನಿಗೆ ರಸದೌತಣವನ್ನು ಉಣಬಡಿಸುತ್ತದೆ. ಒಂದಾನೊಂದು ಕಾಲದಲ್ಲಿ ಸಾಹಿತ್ಯ ಕೃಷಿ ಎನ್ನುವುದು ಕೇವಲ ಉಳ್ಳವರು ಸ್ವತ್ತಾಗಿತ್ತು. ಸಾಹಿತ್ಯ ಸಮಾಜದ ಹಿತವನ್ನು ಈ ಮೊದಲು ಅಷ್ಟಾಗಿ ಗಂಭೀರವೆಂದು ಪರಿಗಣಿಸಿರಲಿಲ್ಲ. ಆದರೆ ಕಾಲ ಬದಲಾದಂತೆ ಸಾಹಿತ್ಯವು ನಿಂತ ನೀರಲ್ಲ ಎಂಬುದನ್ನು ಸತ್ಯವಾಗಿಸಿತು.

ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗೂ ಇತರರಂತೆ ನ್ಯಾಯಯುತವಾಗಿ ಮತ್ತು ಗೌರವದಿಂದ ಬದುಕಲು ಅವಕಾಶಮಾಡಿಕೊಡುವ ನಿಟ್ಟಿನಲ್ಲಿ ಇಂದಿನ ಪ್ರಸ್ತುತತೆಯನ್ನು ಅರಿತುಕೊಂಡು ಎಲ್ಲರಿಗೂ ಸಮಬಾಳು ಸಮಪಾಲು ಸಿಗಬೇಕು ಎಂಬುದನ್ನು ಅತಿ ಸರಳವಾಗಿ ಜನ ಸಾಮಾನ್ಯ ಭಾಷೆಯಲ್ಲಿ ಗ್ರಂಥಗಳು ರಚನೆಗೊಂಡವು. ಜನರ ನಾಡಿಮಿಡಿತ ಹಾಗೂ ನೋವು-ನಲಿವುಗಳಿಗೆ ಧ್ವನಿಯಾಗಿ ಹೊರಬಂದು ತಲೆ ಎತ್ತಿರುವ ಸಾಹಿತ್ಯವೇ ದಲಿತ ಕಾವ್ಯ. ಆಡಳಿತಶಾಹಿ ಮತ್ತು ಅಧಿಕಾರಶಾಹಿಗಳ ಅನ್ಯಾಯ, ದೌರ್ಜನ್ಯ ಮತ್ತು ದಬ್ಬಾಳಿಕೆಯನ್ನು ನೇರವಾಗಿ ವಿರೋಧಿಸಿ ಪ್ರತಿಭಟಿಸುತ್ತಾ ಒಂದು ಸುಂದರ ಸ್ವಾಸ್ಥ್ಯ ಸಮಾಜವನ್ನು ಕಟ್ಟುವಂತಹ ಕೆಲಸಕ್ಕೆ ದಲಿತ ಕಾವ್ಯವು ಅಣಿಯಾಗಿದೆ ಎಂದರೆ ತಪ್ಪಾಗಲಾರದು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುವ ರಾಯಚೂರು ಜಿಲ್ಲೆಯು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರಬಹುದು ಆದರೆ ಸಾಹಿತ್ಯಿಕವಾಗಿ ಈ ಜಿಲ್ಲೆಯು ತುಂಬಾ ಶ್ರೀಮಂತವಾಗಿದೆ. ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೆ ಅನೇಕ ವಿದ್ವಾಂಸರು ಅನೇಕ ರೀತಿಯ ಸಾಹಿತ್ಯದ ಪ್ರಕಾರಗಳಲ್ಲಿ ಕೃಷಿ ಕೈಗೊಂಡು ಕನ್ನಡ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡು ವಿಶ್ವದ ಗಮನವನ್ನು ಸೆಳೆಯಲು ಕಾರಣವಾಗಿದೆ ಎಂಬ ಈ ವಿಷಯವನ್ನು ಈ ಭಾಗದ ಸಾಹಿತ್ಯ ಕ್ಷೇತ್ರದಲ್ಲಿನ ಕಾರ್ಯವನ್ನು ಮರೆಯಬಾರದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುವ ರಾಯಚೂರು ಜಿಲ್ಲೆಯ ದಲಿತ ಕಾವ್ಯ ಯುಗದಲ್ಲಿ ಕಂಡುಬರುವAತಹ ಅನೇಕ ಕವಿಗಳು ತಮ್ಮ ಸೃಜನಶೀಲ ಬರವಣಿಗೆಯಿಂದ ಅನೇಕ ಕಾವ್ಯಗಳನ್ನು ರಚಿಸಿರುವುದು ಅತ್ಯಂತ ಮಹತ್ವವಾಗಿದೆ. ನಾಡಿನ ಉದ್ದಗಲಕ್ಕೂ ದಲಿತರ ಬದುಕಿನ ಸಂಪೂರ್ಣ ಮತ್ತು ಸಮಗ್ರ ಚಿತ್ರಣವನ್ನು ತೋರಿಸುವಂತಹ ಕಾರ್ಯವನ್ನು ನಾವು ನೋಡಬಹುದು. ಈ ಭಾಗದ ಗಡಿನಾಡಿಗೆ ಹೊಂದಿರುವಂತಹ ಅನೇಕ ಹಳ್ಳಿಗಳಲ್ಲಿ ಇಂದಿಗೂ ಜನರು ಯಾವ ರೀತಿಯಲ್ಲಿ ಹೇಗೆ ಸಾಗುತ್ತಿದ್ದಾರೆ? ಅಲ್ಲದೆ ಈ ಸಮಾಜವು ಕೆಳವರ್ಗದ ಜನರಿಗೆ ಎಂತಹ ಸ್ಥಾನಮಾನವನ್ನು ನೀಡಿದೆ ಎಂಬುದನ್ನು ತಿಳಿಯಬಹುದು. ದಲಿತರು ಕರುಣಾಮಯಿ ಸ್ನೇಹಜೀವಿಗಳಾಗಿದ್ದು, ಸಹಿಸುವ ಶಕ್ತಿಯನ್ನು ಹೊಂದಿದ್ದಾರೆ. ದಲಿತರ ಜೀವನದಲ್ಲಿ ಅನೇಕ ಕಷ್ಟಕಾರ್ಪಣ್ಯಗಳು ಬಂದರೂ ಯಾವುದಕ್ಕೂ ಹೆದರದೆ, ಅಂಜದೆ, ಅಳುಕದೆ ಜೀವನವನ್ನು ಸಾಧಿಸುವಂತಹ ಪರಿಯನ್ನು ನೋಡಬಹುದು.

ಹೊಸಗನ್ನಡ ಸಾಹಿತ್ಯ ಘಟ್ಟಗಳಲ್ಲಿ ಬರುವ ನವೋದಯ, ಪ್ರಗತಿಶೀಲ, ನವ್ಯ ಇವುಗಳಲ್ಲಿ ದಲಿತ ಸಾಹಿತ್ಯವು ಬೆಳೆದು ಬಂದ ಬಗೆಯೇ ಒಂದು ಮರೆಯಲಾರದ ಸಂದರ್ಭ. ನವ್ಯ ಸಾಹಿತ್ಯ ಘಟ್ಟವು ಬಹುತೇಕ ತಮ್ಮ ಬರವಣಿಗೆಯಲ್ಲಿ ಹೆಚ್ಚಾಗಿ ಕಾಲ್ಪನಿಕವಾದ ನೆಲೆಯಲ್ಲಿ ಬರೆದು ಅಲ್ಲಿಗೆ ಸೀಮಿತವಾದರೆ, ದಲಿತ ಸಾಹಿತ್ಯವು ಕಾಲ್ಪನಿಕ ನೆಲೆಯನ್ನು ವಿರೋಧಿಸಿ ಪ್ರಸ್ತುತ ವಾಸ್ತವಿಕವಾದ ನೆಲೆಯಲ್ಲಿ ಜ್ಞಾನವನ್ನು ಮೈಗೂಡಿಸಿಕೊಂಡು ಜನಪದವಾದ ಸಾಹಿತ್ಯದ ಹುಟ್ಟಿಗೆ ನಾಂದಿಯಾಗಿ ಈ ದಲಿತ ಸಾಹಿತ್ಯ ಇಂದು ತನ್ನ ವಿಸ್ತಾರವನ್ನು ವಿಸ್ತರಿಸಿಕೊಂಡು ಪ್ರಸ್ತುತ ದಿನ ಮಾನಗಳಲ್ಲಿ ಅತ್ಯಂತ ಗಟ್ಟಿಯಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಈ ಸಾಹಿತ್ಯದ ಹುಟ್ಟಿಗೆ ತನ್ನದೇ ಆದ ಪ್ರಭಾವ ಪ್ರೇರಣೆಗಳು ಕಾರಣವಾಗಿರುವುದನ್ನು ನಾವು ಮರೆಯುವಂತಿಲ್ಲ. ವಿಶ್ವಮಟ್ಟದಲ್ಲಿ ಕಂಡುಬರುವುದಾದರೆ ಆಫ್ರಿಕಾ ದೇಶದ ಕಪ್ಪು ಸಾಹಿತ್ಯ ಮತ್ತು ಅಮೆರಿಕ ದೇಶದ ನಿಗ್ರೋ ಸಾಹಿತ್ಯದ ಜೊತೆಗೆ ದೇಶೀಯ ಮಟ್ಟದಲ್ಲಿ ಅಂದಿನ ಪ್ರಧಾನಮಂತ್ರಿಯಾಗಿದ್ದ ಇಂದಿರಾಗಾಂಧಿ ಅವರು ಹೇರಿದ ದೇಶದ ತುರ್ತು ಪರಿಸ್ಥಿತಿ ಜಯಪ್ರಕಾಶ್ ನಾರಾಯಣ್ ಅವರ ಚಿಂತನೆಗಳು ಮತ್ತು ಅವರು ಹೂಡಿದ ಜನಾಂದೋಲನ ಅಂಬೇಡ್ಕರ್‌ವಾದ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಮತ್ತು ದಲಿತ ಸಾಹಿತ್ಯ ಚಳುವಳಿ ತೆಲುಗಿನ ದಿಗಂಬರ ಸಾಹಿತ್ಯ, ಮಾರ್ಕ್ಸ್ವಾದ, ಲೋಹಿಯವಾದ ೧೯೭೩ರ ಬಿ. ಬಸವಲಿಂಗಪ್ಪನವರ ಭೂಸಾ ಪ್ರಕರಣ ಮೊದಲ ಹೆಜ್ಜೆ ೧೯೭೪ರಲ್ಲಿ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ರಚನೆ ೧೯೭೯ರ ಧರ್ಮಸ್ಥಳದ ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಕವಿಗೋಷ್ಠಿಯನ್ನು ಏರ್ಪಡಿಸಲು ನಿರಾಕರಣೆ ಮಾಡಿದ್ದು, ಸಮಾಜವಾದ, ಬಸವವಾದ, ಜ್ಯೋತಿಬಾಪುಲೆ, ಶಾಹು ಮಹಾರಾಜ, ನಾರಾಯಣಗುರು, ಪೆರಿಯಾರ್ ರಾಮಸ್ವಾಮಿ, ಹೇಮಂತ ಈ ಮುಂತಾದ ಚಿಂತಕರ ಚಿಂತನೆಗಳ ಜೊತೆಗೆ ಚಂಪಾರ ಸಂಕ್ರಮಣ ಆರ್.ಜಿ.ಹಳ್ಳಿ ನಾಗರಾಜ್ ಅವರ 'ಅನ್ವೇಷಣೆ', ರಘುರಾಮ್ ಶೆಟ್ಟಿ ಅವರ 'ಮುಂಗಾರು' ಮೊದಲಾದ ಪತ್ರಿಕೆಗಳು ಈ ದಲಿತ ಸಾಹಿತ್ಯ ಬೆಳೆಯಲು ಬೇಕಾದ ಅಗತ್ಯ ಪ್ರೇರಣೆ ಮತ್ತು

ಪ್ರಭಾವವನ್ನು ಬೀರಿವೆ. ಹಾಗಾಗಿ ತನ್ನದೇ ಆದ ಪರಂಪರೆಯೊಂದಿಗೆ ಮನೋಧರ್ಮದ ಜೊತೆಗೆ ಅಸ್ತಿತ್ವವನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದು ಗಮನಾರ್ಹ. ದಲಿತ ಸಾಹಿತ್ಯವು ಇಂದು ಜನಪ್ರಿಯವಾಗಲು ಮುಖ್ಯ ಕಾರಣಗಳೆಂದರೆ ಸಾಮಾನ್ಯ ಜನರ ದಿನನಿತ್ಯ ಬದುಕಿನಲ್ಲಿ ಬಳಸುವ ಆಡು ಮಾತನ್ನು ಯಾವುದೇ ಬದಲಾವಣೆ ಇಲ್ಲದೆ ಬಳಸಿರುವುದರ ಜೊತೆಗೆ ಬರವಣಿಗೆ ಉದ್ದಕ್ಕೂ ಶೋಷಣೆ ಮಾಡುವವರ ವಿರುದ್ಧ ಆವೇಶ, ಆಕ್ರೋಶ, ಕ್ರಾಂತಿಕಾರಕ ಪ್ರತಿಭಟನೆ ಯಾವುದೇ ಅಂಜಿಕೆಯಿಲ್ಲದೆ, ಅಳಿಕಿಲ್ಲದೆ ಯಾರ ಮುಲಾಜಿಗೂ ಒಳಗಾಗದೆ, ತಮ್ಮ ಅನುಭವಕ್ಕೆ ಬಂದ ಹಾಗೂ ಕಣ್ಣಾರೆ ಕಂಡ ವ್ಯವಸ್ಥೆಯ ವಿಡಂಬನೆ ಮತ್ತು ವಿಷಾದಗಳು ಲಕ್ಷಣಗಳಾಗಿವೆ.

ದಲಿತ ಕಾವ್ಯವು ಮೊದಮೊದಲು ಕೇವಲ ಚಳುವಳಿ, ಘೋಷಣೆ ಮತ್ತು ಬೈಗಳಿಂದ ಕೂಡಿದ್ದಾಗಿ ಅರೆಬರೆ ಅನುಭವಗಳನ್ನು ಸ್ಪಷ್ಟವಾಗಿ ದಾಖಲಿಸಿದರು. ಆನಂತರದ ದಿನಮಾನಗಳಲ್ಲಿ ಆಡಂಬರ, ಸೇಡು, ರೋಷ-ವೇಷಗಳನ್ನು ತಗ್ಗಿಸಿಕೊಂಡು ದಲಿತ ಕಾವ್ಯವು ಬದಲಾವಣೆಗೊಂಡು ತನ್ನ ನಿಲುವು, ಧೋರಣೆ, ಮತ್ತು ಸೈದ್ಧಾಂತಿಕ ಬದ್ಧತೆಯ ಕಡೆಗೆ ಹೆಚ್ಚಿನ ಗಮನವಿಟ್ಟು ಅದನ್ನು ಬದುಕಿನ ಮೂಲ ಸೆಲೆಯಾಗಿಸಿಕೊಂಡು ಜನರ ಕಷ್ಟಗಳಿಗೆ ಸ್ಪಂದಿಸುವ ಪ್ರಾಣ ಮಿತ್ರನಾಗಿ ಮುಂದುವರೆದಿದೆ. ಜೊತೆಗೆ ಘರ್ಷಣೆಯ ಚೌಕಟ್ಟಿಗೆ ಆಯಾಮವನ್ನು ಕಲ್ಪಿಸಿಕೊಟ್ಟಿದೆ. ಮೇಲ್ನೋಟಕ್ಕೆ ಕಣ್ಣಿಗೆ ಕಾಣದೆ ಇದ್ದರೂ ಸಹ ಅದು ರೂಪಗೊಂಡ ಬಹುತೇಕ ಸಾಹಿತ್ಯದಲ್ಲಿ ಅಂತರವಾಹಿನಿಯಾಗಿ ಹರಿದು ಬಂದಿದೆ. ಹಾಗಾಗಿ ಸಾಹಿತ್ಯದ ಅನೇಕ ರೂಪಗಳಲ್ಲಿ ಕಾವ್ಯ ಪ್ರಕಾರವು ತನ್ನ ಸಂದೇಶವನ್ನು ಜನರಿಗೆ ನೇರವಾಗಿ ಮತ್ತು ಧನಾತ್ಮಕವಾಗಿ ಮುಟ್ಟಿಸಲು ಕಾರಣೀಭೂತವಾಗಿದೆ.

ಆಧುನಿಕ ಕನ್ನಡ ಸಾಹಿತ್ಯ ಕಾವ್ಯಗಳಲ್ಲಿ ಕೊನೆಗೆ ಬರುವ ಹಾಗೂ ಪ್ರಸ್ತುತ ನಡೆಯುತ್ತಿರುವ ದಲಿತ ಸಾಹಿತ್ಯದ ಬಹುತೇಕ ಕಾವ್ಯಗಳು ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯಗಳಾದ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ನೆಲೆಯಲ್ಲಿ ಬೆಳೆದು ಬಂದಿತ್ತು. ಗತ ಅನೇಕ ಕಾಲಗಳಿಂದ ಶೋಷಣೆ, ದೌರ್ಜನಕ್ಕೆ ಒಳಗಾದವರ ಧ್ವನಿ, ಹಸಿವು, ಬಡತನ, ದಬ್ಬಾಳಿಕೆ, ಅವಮಾನ, ಜಾತೀಯತೆಯಂತಹ ಅನೇಕ ಸಾಮಾಜಿಕ ಪಿಡುಗುಗಳಿಗೆ ಸಿಲುಕಿ ಜನರ ರೋಸಿ, ತತ್ತರಿಸಿ ಹೋಗಿದ್ದರು. ಇಂತಹ ಜನಾಂಗ ಅನೇಕ ಕಥೆ ವ್ಯಥ್ಯಗಳಿಗೆ ಧ್ವನಿಯಾಗಿ ದಲಿತರಿಗೆ ಅರಿವು ಜಾಗೃತಿ ಮೂಡಿಸುವುದರ ಜೊತೆಗೆ ಇಲ್ಲಿನ ಜನರ ಬದುಕಿನಲ್ಲಿ ಪ್ರತಿನಿತ್ಯ ಸಾಮಾನ್ಯವಾಗಿ ಬಳಸುವ ಆಡುಮಾತಿನ ಭಾಷೆಯನ್ನು ಉಪಯೋಗಿಸಿಕೊಂಡು ಶೋಷಣೆ ಮಾಡುವವರ ವಿರುದ್ಧ ಸಿಡಿದೇಳುವ ಮೂಲಕ ಆವೇಶ, ಆಕ್ರೋಶ, ಸಿಟ್ಟು ಮುಂತಾದವುಗಳ ಶಕ್ತಿಯನ್ನು ಕಾವ್ಯದಲ್ಲಿ ಮೈಗೂಡಿಸಿಕೊಂಡರು.

ಭಾರತ ದೇಶದಲ್ಲಿ ಅನಾದಿಕಾಲದಿಂದಲೂ ನಿರಂತರವಾಗಿ ನಡೆದುಕೊಂಡು ಬಂದಿರುವಂತಹ ಸಾಮಾಜಿಕ ವ್ಯವಸ್ಥೆಯ ವಿನ್ಯಾಸ ಹಿಂದಿನ ಆಧುನಿಕ ಯುಗದಲ್ಲಿಯೂ ಮುಂದುವರಿಸಿಕೊಂಡು ಹೋಗುತ್ತಿರುವುದು ದುರಂತವೇ ಸರಿ. ಭಾರತ ದೇಶದ ಜನರ ಉಡುಗೆ-ತೊಡುಗೆ, ವೇಷ-ಭೂಷಣ, ಪದ್ಧತಿ-ಪರಂಪರೆ ಎಂಬ ಸಂಸ್ಕೃತಿಯ ಅನೇಕ ಅಂಶಗಳು ಬದಲಾವಣೆಗೊಂಡಿವೆ ಎಂದು ಸಂತೋಷ ಪಡುವುದಾದರೆ ಮತ್ತೊಂದೆಡೆಯಲ್ಲಿ ಭಾರತ ದೇಶವನ್ನು ಕಾಡುವಂತಹ ಸಾಮಾಜಿಕ ಸಮಸ್ಯೆಗಳಾದ ಬಡತನ, ದೌರ್ಜನ್ಯ, ಅತ್ಯಾಚಾರ, ದಬ್ಬಾಳಿಕೆ, ಜಾತೀಯತೆ, ಮೋಸ, ವಂಚನೆ, ಕೊಲೆ, ಸುಲಿಗೆ, ವರ್ಣಭೇದ, ವರ್ಗಭೇದ ಇನ್ನೂ ಮುಂತಾದ ಅನೇಕ ಅಮಾನವೀಯ ಮತ್ತು ಅನಿಷ್ಟ ಪದ್ಧತಿಗಳ ಮೌಢ್ಯ ಆಚರಣೆ ಎಂಬ ಗೊಡ್ಡು ಸಂಪ್ರದಾಯ ಜೊತೆಗೆ ಬದುಕು ಸಾಗಿಸುವಂತಹ ವ್ಯವಸ್ಥೆಯ ವಿರುದ್ಧ ಬಂಡೆದ್ದು, ಸಿಡಿದೇಳುವ ಮನೋಭಾವನೆಯನ್ನು ಬಳಸಿದ್ದು, ದಲಿತ ಕಾವ್ಯ ಎಂದು ಎದೆಯುಬ್ಬಿಸಿ ಹೇಳಬಹುದು

ಅದಕ್ಕಾಗಿ ಸಂಶೋಧನಾತ್ಮಕವಾದ ದೃಷ್ಟಿಕೋನದಿಂದ ಈ ನೋವುಗಳಿಗೆ ದಲಿತ ಸಾಹಿತ್ಯದ ಕಾವ್ಯವು ಹೇಗೆ ಸ್ಪಂದಿಸಿದೆ ಎಂಬುದನ್ನು ಪ್ರಸ್ತುತ ದಿನ ಮಾನಗಳಲ್ಲಿ ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

ಭಾರತ ದೇಶದ ಸಾಹಿತ್ಯ ಶ್ರೀಮಂತಗೊಂಡು ಇಂದು ವಿಶ್ವಮಟ್ಟದಲ್ಲಿ ತನ್ನದೇ ಆದ ವೈಶಿಷ್ಟತೆಯನ್ನು ಮೈಗೂಡಿಸಿಕೊಂಡು ಸಾಗಬೇಕಾದರೆ ಅದರಲ್ಲಿ ಕರ್ನಾಟಕ ಸಾಹಿತ್ಯ ವಿಶೇಷವಾಗಿ ಕಲ್ಯಾಣ ಕರ್ನಾಟಕದಲ್ಲಿ ಬರುವ ರಾಯಚೂರು ಜಿಲ್ಲೆಯ ಸಾಹಿತ್ಯವನ್ನು ಮರೆಯುವಂತಿಲ್ಲ, ಎಂದರೆ ಬಹುಶಃ ತಪ್ಪಾಗದು. ಜಗತ್ತಿಗೆ ಮಾನವೀಯ ಮೌಲ್ಯಗಳನ್ನು ಸಾರಿ ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಈ ಭಾಗದಲ್ಲಿಯೇ ಜನ್ಮ ತಾಳಿದ ದಾಸ ಸಾಹಿತ್ಯದ ಪರಂಪರೆಯನ್ನು ಮರೆಯುವಂತಿಲ್ಲ. ಇಂತಹ ರಾಯಚೂರು ಜಿಲ್ಲೆ ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ತುಂಬಾ ಶ್ರೀಮಂತಿಕೆಯಿಂದ ಕೂಡಿದ ನಾಡಾಗಿದೆ. ಈ ಜಿಲ್ಲೆಗೆ "ದೋ ಅಬ್" ಪ್ರದೇಶ ಎಂತಲೂ ಮತ್ತೊಂದು "ಎಡೆದೊರೆ ನಾಡು" ಎಂತಲೂ ಕರೆಯುವ ವಾಡಿಕೆ ಇದೆ. ಅಂದರೆ ಉತ್ತರಕ್ಕೆ ಕೃಷ್ಣ ನದಿಯು ದಕ್ಷಿಣಕ್ಕೆ ತುಂಗಭದ್ರ ನದಿಗಳು ಹರಿಯುತ್ತಾ, ಈ ಭಾಗದ ಲಕ್ಷಾಂತರ ರೈತರ ಜಮೀನುಗಳಿಗೆ ನೀರುಣಿಸುವ ಮೂಲಕ ಸಮೃದ್ಧವಾಗಿಸಿವೆ. ಈ ಎರಡು ನದಿಗಳು ಹರಿದು ಈ ಭಾಗದ ಜನರ ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ಸಾಗಿವೆ.

ಈ ಜಿಲ್ಲೆಯನ್ನು ಈ ಮೊದಲು ವಿಜಯನಗರ ಸಾಮಂತ ರಾಜರು ಆಳ್ವಿಕೆಯನ್ನು ಮಾಡಿ ಮುಂದೆ ಬಿಜಾಪುರದ ಆದಿಲ್ ಶಾಹಿಗಳು ಅಂತಿಮವಾಗಿ ಹೈದರಾಬಾದ್‌ನ ನಿಜಾಮನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡು ಜನರ ಜೀವನದಲ್ಲಿ ಅರಾಜಕತೆಯನ್ನು ಸೃಷ್ಟಿಸಿದನು. ಇದನ್ನು ಮನಗಂಡು ನಮ್ಮ ದೇಶದ ಮೊದಲ ಗೃಹ ಮಂತ್ರಿ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಬಾಯ್ ಪಟೇಲ್ ಅವರು ಮಿಲಿಟರಿ ಕಾರ್ಯಾಚರಣೆ ಮಾಡುವ ಮೂಲಕ ನಿಜಾಮನನ್ನು ಸೋಲಿಸಿ, ಅಖಂಡ ಭಾರತದ ಒಕ್ಕೂಟಕ್ಕೆ ಕಲ್ಯಾಣ ಕರ್ನಾಟಕ ಭಾಗವನ್ನು ಸೇರಿಸಿದರು.

ಈ ಜಿಲ್ಲೆಯು ಹಲವು ಖ್ಯಾತಿಗಳಿಗೆ ಹೆಸರುವಾಸಿಯಾಗಿದ್ದು ಸ್ವಾತಂತ್ರದ ಪೂರ್ವದಲ್ಲಿಯೇ ಜಿಲ್ಲಾ ಕೇಂದ್ರವಾಗಿತ್ತು ಎನ್ನುವುದು ಮತ್ತೊಂದು ವಿಶೇಷ. ಏಷ್ಯಾ ಖಂಡದಲ್ಲಿಯೇ ಅತಿ ಹೆಚ್ಚು ಹತ್ತಿ ಮಾರಾಟಕ್ಕೆ ಅತಿ ದೊಡ್ಡ ಮಾರುಕಟ್ಟೆ, ಏಷ್ಯಾ ಖಂಡದಲ್ಲಿಯೇ ಹೆಚ್ಚು ಭತ್ತವನ್ನು ಬೆಳೆಯುವಂತಹ ಮತ್ತು ಅತಿ ಹೆಚ್ಚು ಟ್ರ್ಯಾಕ್ಟರ್‌ಗಳನ್ನು ಮಾರಾಟ ಮಾಡುವ ತಾಲೂಕು ಸಿಂಧನೂರು ಜಿಲ್ಲೆಯಲ್ಲಿದೆ. ಮುಂದುವರೆದು ಲಿಂಗಸುಗೂರು ತಾಲೂಕಿನ ಹಟ್ಟಿ ಎಂಬ ಗ್ರಾಮದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ದೇಶದ ಏಕೈಕ ಗಣಿ ಇರುವುದು ಇಲ್ಲಿಯೇ ಹಾಗೆಯೇ ರಾಜ್ಯದ ಅರ್ಧಕ್ಕಿಂತ ಹೆಚ್ಚು ವಿದ್ಯುತ್ತನ್ನು ಉತ್ಪಾದಿಸುವ ಆರ್‌ಟಿಪಿಎಸ್, ವೈಟಿಪಿಎಸ್ ಇರುವುದು ಇಲ್ಲಿಯೇ ಸಾಮ್ರಾಟ್ ಅಶೋಕನ ದೇವನಾಂಪ್ರಿಯಾದರ್ಶಿಣಿ ಎಂಬ ಹೆಸರಿನ ಶಿಲಾಶಾಸನಗಳು ಸಿಕ್ಕಿದ್ದ ಕೂಡ ಇದೇ ಜಿಲ್ಲೆಯ ಮಸ್ಕಿಯಲ್ಲಿ ಇತಿಹಾಸ ಪ್ರಸಿದ್ಧ ಭಾವೈಕ್ಯತೆಯ ಸಂಕೇತವಾದ ಮೊಹರಂ ಹಬ್ಬವನ್ನು ಅತ್ಯಂತ ವೈಭವದಿಂದ ನಡೆಸುವಂತಹ ಮುದುಗಲ್ ಸಹ ಇದೇ ಜಿಲ್ಲೆಯಲ್ಲಿದೆ ಗುರುಗುಂಟ ಅಮರೇಶ್ವರ ದೇವಸ್ಥಾನ, ಸಿಂಧನೂರಿನ ಅಂಬಾಮಠ, ಕಲ್ಲೂರಿನ ಮಹಾಲಕ್ಷ್ಮಿ, ನೀರಮಾನವಿಯ ಯಲ್ಲಮ್ಮ ಮತ್ತು ದೇವಸುಗೂರಿನ ಶ್ರೀ ಸೂಗುರೇಶ್ವರ ದೇವಸ್ಥಾನ ಮುಂತಾದವುಗಳು ಈ ಭಾಗದ ಪವಿತ್ರ ಹಾಗೂ ಪುಣ್ಯ ಕ್ಷೇತ್ರಗಳಾಗಿವೆ.

ರಾಯಚೂರು ಜಿಲ್ಲೆಯು ಇತ್ತೀಚೆಗೆ ನೂತನ ತಾಲೂಕುಗಳ ಸೇರ್ಪಡೆಯೊಂದಿಗೆ ಒಟ್ಟು ಎಂಟು ತಾಲೂಕುಗಳನ್ನು ಹೊಂದಿದ್ದು, ಅವುಗಳೆಂದರೆ ರಾಯಚೂರು, ಮಾನ್ವಿ, ಸಿಂಧನೂರು, ಲಿಂಗಸುಗೂರು, ದೇವದುರ್ಗ, ಮಸ್ಕಿ, ಸಿರವಾರ ಮತ್ತು ಅರಕೇರಾಗಳು ಈ ಜಿಲ್ಲೆಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಮುಂತಾದ ಉನ್ನತ ಮಟ್ಟದ ಶಿಕ್ಷಣವನ್ನು ನೀಡುವ ವಿದ್ಯಾ ಕೇಂದ್ರವಾಗಿವೆ. ಈ

ಜಿಲ್ಲೆಯು ಒಟ್ಟು ಏಳು ವಿಧಾನಸಭಾ ಸ್ಥಾನಗಳನ್ನು ಹೊಂದಿದ್ದು ರಾಯಚೂರು-ಯಾದಗಿರಿ ಜಿಲ್ಲೆಗಳನ್ನು ಒಳಗೊಂಡ ಲೋಕಸಭಾ ಕ್ಷೇತ್ರವಾಗಿದೆ. ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿಯಾಗಿದ್ದು, ಭತ್ತ, ಹತ್ತಿ, ತೊಗರಿ, ಮೆಣಸಿನಕಾಯಿ, ಜೋಳ, ಕಡಲೆ ಮುಂತಾದ ಬೆಳೆಗಳನ್ನು ಬೆಳೆದು ಜೀವನವನ್ನು ಸಾಗಿಸುತ್ತಿದ್ದಾರೆ. ಈ ಜಿಲ್ಲೆಯ ಕೇಂದ್ರದಿಂದ ಒಂದು ಕಡೆ ಕೇವಲ ೨೫ ಕಿ.ಮೀ ಚಲಿಸಿದರೆ ತೆಲಂಗಾಣ ರಾಜ್ಯವಿದ್ದು, ಮತ್ತೊಂದು ಕಡೆ ಕೇವಲ ೩೦ ಕಿ.ಮೀ. ಚಲಿಸಿದರೆ ಆಂಧ್ರಪ್ರದೇಶ ರಾಜ್ಯವಿದ್ದು, ಈ ಎರಡು ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಜೊತೆಗೆ ಈ ಜಿಲ್ಲೆಗೆ ಯಾದಗಿರಿ, ಬಾಗಲಕೋಟೆ, ವಿಜಯಪುರ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಸಹ ಗಡಿಯನ್ನು ಹಂಚಿಕೊAಡಿದೆ. ಇಂತಹ ಗಡಿ ಪ್ರದೇಶಕ್ಕೆ ಹೊಂದಿಕೊಂಡಿರುವ ಈ ಭಾಗದಲ್ಲಿ ಪಕ್ಕದ ರಾಜ್ಯಗಳ ಮಾತೃಭಾಷೆಯದ ತೆಲುಗು ಮತ್ತು ಉರ್ದು ಭಾಷೆಯ ಪ್ರಭಾವವನ್ನು ಈ ಭಾಗದ ಜನರ ಮೇಲೆ ಆಗಿರುವುದನ್ನು ಅಲ್ಲಗೆಳೆಯುವಂತಿಲ್ಲ ಆದರೂ ಅವೆಲ್ಲವನ್ನು ಮೆಟ್ಟಿನಿಂತು ಆಧುನಿಕ ಸಾಹಿತ್ಯ ಘಟ್ಟಗಳಲ್ಲಿ ಬರುವ ದಲಿತ ಸಾಹಿತ್ಯ ಈ ಭಾಗದಲ್ಲಿ ಅತ್ಯಂತ ಗಟ್ಟಿಯಾಗಿ ಇಲ್ಲಿನ ಅನೇಕ ದಲಿತರ ಬಾಳಿಗೆ, ನೊಂದವರ ಬದುಕಿಗೆ ಬೆಳಕಾಗಿ ಕೆಲಸವನ್ನು ಮಾಡಿದೆ. ಹಾಗಾಗಿ ದಲಿತ ಸಾಹಿತ್ಯ ಎಂದರೆ ಎಲ್ಲರು ತಿರುಗಿ ನೋಡುವುದು ಮೊದಲು ರಾಯಚೂರು ಜಿಲ್ಲೆಯನ್ನು. ಈ ಹಿಂದಿನ ಅನೇಕ ಸಾಹಿತ್ಯ ಘಟ್ಟಗಳು ಕೇವಲ ಕಲ್ಪನಾ ಲೋಕದಲ್ಲಿ ಓದುಗರನ್ನು ವಿಹರಿಸುವಂತೆ ಮಾಡಿ ಕಾಲ್ಪನಿಕತೆಯ ಕಟ್ಟುಕಥೆಯಲ್ಲಿ ತೇಲಾಡುವಂತೆ ಮಾಡಿದವು. ಅಂತಹ ೭೦ರ ದಶಕದಲ್ಲಿ ಜನರ ನೋವಿಗೆ ಸ್ಪಂದಿಸುವಂತಹ ಜನರ ಬದುಕಿಗೆ ದಾರಿದೀಪವಾದಂತಹ ಸಾಹಿತ್ಯವೇ ದಲಿತ ಸಾಹಿತ್ಯ. ಈ ಸಾಹಿತ್ಯ ಈ ಮೊದಲು ಕೇವಲ ಹೋರಾಟ ಮತ್ತು ಸಂಘಟನೆಗೆ ಮಾತ್ರ ಸೀಮಿತವಾಗಿದ್ದು, ಹೋರಾಟ ಮತ್ತು ಸಂಘಟನೆಯ ವಿಷಯ ವಸ್ತುವನ್ನು ಬರವಣಿಗೆಯಲ್ಲಿ ತರುವಂತಹ ಪ್ರಯತ್ನವನ್ನು ಅನೇಕ ದಲಿತ ಕವಿಗಳು ಮಾಡಿದರು. ದಲಿತ ಕವಿಗಳ ಬರವಣಿಗೆ ಕೇವಲ ಓದುಗರನ್ನು ಮೆಚ್ಚಿಸಲಿಕ್ಕೆ ಮಾತ್ರವಲ್ಲ, ಅದು ಅವರ ಮನ ಮುಟ್ಟಿ ದಲಿತರ ಸಾಮಾಜಿಕ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಭಾವವನ್ನು ಬೀರಿತು.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಬರುವಂತಹ ಮೇಲ್ವರ್ಗವು, ಕೆಳವರ್ಗದ ಮೇಲೆ ಮಾಡುತ್ತಿರುವ ಅನ್ಯಾಯ, ಅತ್ಯಾಚಾರ, ಮೋಸ, ವಂಚನೆ, ಕೊಲೆ, ಸುಲಿಗೆ, ಜಾತಿಭೇದ, ವರ್ಗಭೇದ, ವರ್ಣಭೇದ, ಬಡತನ, ಅನಕ್ಷರತೆ, ಶೋಷಣೆ, ದಬ್ಬಾಳಿಕೆ, ಬರಗಾಲ, ಜೀತಪದ್ದತಿ, ಜಮೀನ್ದಾರಿ ಪದ್ಧತಿ, ಮೂಢನಂಬಿಕೆ, ಅವಮಾನ, ಅಪಮಾನ ಮುಂತಾದವುಗಳ ವಿರುದ್ಧ ಹೋರಾಡಿ ಸ್ವಾಭಿಮಾನದಿಂದ ಬದುಕುವಂತೆ ಎಲ್ಲಾ ದಲಿತರಿಗೂ ದಲಿತ ಸಾಹಿತ್ಯವು ಪ್ರೇರೇಪಿಸಿತು. ಡಾ.ಬಿ.ಆರ್. ಅಂಬೇಡ್ಕರ್, ಲೋಹಿಯಾ, ಜ್ಯೋತಿಬಾಪುಲೆ, ಬಸವಣ್ಣ, ಶಾಹು ಮಹಾರಾಜ್ ಮುಂತಾದ ಅನೇಕ ಮಹಾತ್ಮರ ವಿಚಾರಗಳ ಪ್ರಭಾವಕ್ಕೆ ಒಳಪಟ್ಟು ದಲಿತರು ತಮ್ಮ ಹಕ್ಕುಗಳಿಗಾಗಿ, ಸ್ವಾಭಿಮಾನಕ್ಕಾಗಿ, ಸಮಾನತೆಯ ಬದುಕಿಗಾಗಿ ಒಂದು ಸಂಘಟನಾತ್ಮಕ ಹೋರಾಟ ಹಾಗೂ ಬರವಣಿಗೆಯ ಮೂಲಕ ಅನ್ಯಾಯ, ಶೋಷಣೆ ಮುಂತಾದ ಅಮಾನವೀಯ ಗುಣಗಳ ವಿರುದ್ಧ ಹೋರಾಡಿ ಪ್ರತಿಭಟಿಸಿ, ಎಲ್ಲರೂ ನೆಮ್ಮದಿ, ಸುಖ-ಶಾಂತಿ ಮತ್ತು ಸಮೃದ್ಧಿಯೊಂದಿಗೆ ಬದುಕನ್ನು ನಡೆಸುವುದಕ್ಕಾಗಿ ದಲಿತ ಸಾಹಿತ್ಯವು ಸದಾ ಮಿಡಿಯುತ್ತಿತ್ತು. ಹಾಗಾಗಿ ಅನೇಕ ದಲಿತಪರ ಸಂಘಟನೆಗಳು ಹೋರಾಟ ಮಾಡುತ್ತಾ, ನೊಂದ ಜನರ ನೋವಿಗೆ ಸ್ಪಂದಿಸುವಂತಹ ಕಾರ್ಯದಲ್ಲಿ ಕ್ರಿಯಾಶೀಲರಾದರು.

ಅದರಲ್ಲಿ ರಾಯಚೂರು ಜಿಲ್ಲೆ ಮೊದಲನೆಯ ತಲೆಮಾರಿನಲ್ಲಿ ಬರುವ ಈ ಭಾಗದ ಅತ್ಯಂತ ಹಿರಿಯ ದಲಿತ ಸಾಹಿತಿಗಳಾದ ಬೋಳಬಂಡಪ್ಪ ಆದಿಯಾಗಿ ಸೋಮಯ್ಯ ವಲ್ಲಭ, ಅಂಬಣ್ಣ ಆರೋಲೀಕರ್, ಆರ್. ಮಾನಸಯ್ಯ,

ಬಾಬು ಭಂಡಾರಿಗಲ್, ಆಂಜನೇಯ ಜಾಲಿಬೆಂಚಿ, ವೀರ ಹನುಮಾನ್, ಆನಂದ ಜೂಕೂರು, ಸಿದ್ದರಾಮಪ್ಪ ಭಂಡಾರಿಗಲ್, ದಾನಯ್ಯ ನೀಲೋಗರ್, ನರಸಿಂಹಪ್ಪ ರಾಮತ್ನಾಳ್, ಎಚ್‌ಎಫ್ ಮಸ್ಕಿ, ಈರಣ್ಣ ಕೋಸಿಗಿ, ತಾಯಪ್ಪ ಕೊಂಬೀನ್, ವೆಂಕಟೇಶ್ ಬೇವಿನಬೆಂಚಿ, ವೇಣು ಜಾಲಬೆಂಚಿ, ವೈ.ಕೆ.ಯಶೋಧ, ಎಂ.ಆರ್.ಬೇರಿ, ಈರಣ್ಣ ಕರುನಾಡಕರ್, ಎಂ.ಬಿ. ನರಸಿಂಹ ವಡವಟ್ಟಿ, ಶ್ರೀಮತಿ ವಿಜಯಲಕ್ಷ್ಮಿ, ನರಸಪ್ಪ ಗೊನವಾರ್, ಮುನಿಯಪ್ಪ ನಾಗೋಲಿ, ಡಾ. ಮಲ್ಲಯ್ಯ, ತಾಯರಾಜ್ ಮರ್ಚೆಟಾಳ್, ಶ್ರೀಮತಿ ಸಂಗಮೇಶ್ವರಿ, ಶ್ರೀಮತಿ ರಾಣಿ ನೆಲಹಾಳ, ಶ್ರೀಮತಿ ಸುಕಲತಾ ನೆಲಹಾಳ, ಅಮರೇಶ್ ಬಲ್ಲಿದವ, ಶ್ರೀಮತಿ ಮಲ್ಲಮ್ಮ ಯಾಟಗಲ್, ಡಾ.ಶರಣಪ್ಪ ರಾಯಕುಂಪಿ, ರಮೇಶ್ ರಾಮನಾಳ, ರವಿ ರಾಯಚೂರಕರ್, ಶ್ರೀಮತಿ ನಾಗರತ್ನ ಚಂದ್ರಕಾಂತ ಅಕ್ಕರಗಿ, ವಿಶ್ವನಾಥ್ ಬಲ್ಲಿದವ, ಬೂದೆಪ್ಪ ಗಬ್ಬೂರು, ಚರಣ್ ಕೋಟೆ, ಶಾಮ್ ಕೆ ಇರಬಗೆರಾ, ಹನುಮಂತರಾಯ ಸಿ. ಡಾ.ಹುಸೇನಪ್ಪ ಅಮರಾಪುರ, ನಾಗರಾಜ್ ವಲ್ಕಂದಿನ್ನಿ, ಶಂಕರ ವಾಲೇಕರ, ವೀರೇಶ್ ತಿಮ್ಮಾಪುರ, ಬಸವರಾಜ ಹೃತ್ಸಾಕ್ಷಿ, ಸುರೇಶ್ ಬಾಬು, ಚಂದ್ರಶೇಖರ್ ಮದ್ಲಾಪುರ, ರೇಣುಕಾ ಮಾಡಗಿರಿ, ಶರಣಪ್ಪ ಬುದ್ದಿನ್ನಿ, ಹುಲಿಗೆಪ್ಪ ಬುದ್ದಿನ್ನಿ, ಅಮರೇಶ್ ವೆಂಕಟಾಪುರ, ರಾಯಪ್ಪ ಸರ್ಜಾಪುರ, ಡಾ.ಶಿವರಾಜ್ ಯಾಟಗಲ್, ಹುಲ್ಲಪ್ಪ ವನಕಿಹಾಳ್, ಅಮರಯ್ಯ ಗಂಟೆ, ಪರಶುರಾಮ ನಾಗನೂರು, ಲಕ್ಷ್ಮಣ ಭಾರಿಕರ್, ಬಿ.ಪಿ. ಕಟ್ಟಿಮನಿ, ದುರ್ಗಪ್ಪ ಗುಡದೂರು, ರಾಮ ರಾಥೋಡ್ ಮುಂತಾದ ಅನೇಕ ದಲಿತ ಕವಿಗಳು, ಚಿಂತಕರು, ಹೋರಾಟಗಾರರು, ಬರಹಗಾರರು ಜಿಲ್ಲೆಯ ಯಾವುದೇ ಮೂಲೆಯಲ್ಲಿ ಅನ್ಯಾಯ, ಶೋಷಣೆ, ದೌರ್ಜನ್ಯ, ಹಲ್ಲೆ, ಅವಮಾನ, ಅಪಮಾನ ಮುಂತಾದ ಅಮಾನವೀಯ ಪ್ರಕರಣಗಳು ನಡೆದಾಗ ಅವುಗಳ ವಿರುದ್ಧ ತೊಡೆ ತಟ್ಟಿ ನಿಲ್ಲುವ ರೀತಿಯಲ್ಲಿ ತೀವ್ರವಾದ ಪ್ರತಿಭಟನೆ ಮತ್ತು ಹೋರಾಟಕ್ಕೆ ಸಂಬಂಧಿಸಿದ ಹಲವು ಕವನ, ಕಥೆ, ಕಾದಂಬರಿ, ಗಜಲ್, ಲೇಖನ, ವೈಚಾರಿಕ, ಅನುವಾದ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಬರವಣಿಗೆಯನ್ನು ಮಾಡಿ, ಜನರ ಮನಸ್ಸಲ್ಲಿ ಸದಾ ಶಾಶ್ವತವಾಗಿ ಉಳಿದಿದ್ದಾರೆ.

**ಪರಾಮರ್ಶನ ಗ್ರಂಥಗಳು**

೧. ಬಂಡಾಯ-ದಲಿತ ಸಾಹಿತ್ಯ - ಡಾ. ಪುರುಷೋತ್ತಮ ಬಿಳಿಮಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು-೨೦೦೫.

೨. ಹೈದ್ರಾಬಾದ ಕರ್ನಾಟಕ ದಲಿತ ಸಾಹಿತ್ಯ - ಡಾ.ಎಂ.ಆರ್.ಚಲವಾದಿ, ಸಾಕ್ಷಿ ಪ್ರತಿಷ್ಠಾನ ಹುಮನಾಬಾದ್ ಬೀದರ್ ೨೦೧೦.

೩. ಹೈದ್ರಾಬಾದ ಕರ್ನಾಟಕ ದಲಿತ ಕಾವ್ಯ-ಡಾ.ಸೂರ್ಯಕಾಂತ ಎಸ್.ಸುಜ್ಯಾತ್, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ೨೦೧೪.

೪. ದಲಿತರ ಕೂಗು... - ಡಾ.ಮಹಾಂತಗೌಡ, ದಲಿತ ಸಾಹಿತ್ಯ ಪರಿಷತ್(ರಿ.) ತಾಲೂಕ ಘಟಕ ಲಿಂಗಸೂಗುರು, ರಾಯಚೂರು-೨೦೧೭.

೫. ಕನ್ನಡ ದಲಿತ ಸಾಹಿತ್ಯ-ಡಿ.ಎಸ್.ಚೌಗಲೆ, ಸಿರಿವರ ಪ್ರಕಾಶನ, ೨೦೧೨